**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 715/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ.03**

**ದಿನಾಂಕಃ 13.03.2026 ಸಿಡಬ್ಲ್ಯೂ.05**

| | |
|---|---|
| ಹೆಸರು | ಬಸವರಾಜ |
| ತಂದೆ ಹೆಸರು | ಕರಿಬಸಪ್ಪ |
| ವಯಸ್ಸು | 44 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಮಲೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರ ಪರಿಚಯವಿದೆ. ಚಾಸಾ.1 ರಿಂದ 4 ಮತ್ತು 6 ರವರ ಪರಿಚಯವಿದೆ. ಈಗ್ಗೆ 5 ವರ್ಷಗಳ ಹಿಂದೆ ದಿಃ 25.10.2021 ರಂದು ರಾತ್ರಿ 9.00 ಗಂಟೆಗೆ ನಾನು ಮತ್ತು ಚಾಸಾ.6 ರವರು ಚಾಸಾ.1 ರವರ ಮನೆಯ ಮುಂಬಾಗದಿಂದ ನಮ್ಮ ಕಣಕ್ಕೆ ಹುಲ್ಲು ತರಲು ಹೋಗಿದ್ದೆವು. ಸದರಿ ಸಂಗಯ್ಯ, ಚನ್ನೇಶ, ಮಲ್ಲಿಕಾರ್ಜುನ ಚಾಸಾ.1 ರವರ ಮನೆ ಮುಂದೆ ಗಲಾಟೆ ಮಾಡುತ್ತಿದ್ದರು. ಸದರಿ ಸಂದರ್ಭದಲ್ಲಿ 1 ನೇ ಆರೋಪಿ ಚಾಸಾ.1 ರವರನ್ನು ಹಿಡಿದು ಹೊರಗಡೆ ಕರೆದು ಕೈ ಹಿಡಿದು ಎಳೆದರು. ಸದರಿ ಸಂದರ್ಭದಲ್ಲಿ 1 ನೇ ಆರೋಪಿ ಕೆಟ್ಟ ಕೆಟ್ಟ ಶಬ್ದದಿಂದ ಚಾಸಾ.1 ರವರಿಗೆ ಬೈದರು. ಸದರಿ ಸಂದರ್ಭದಲ್ಲಿ 1 ನೇ ಆರೋಪಿ ಮತ್ತು ಅವರ ಹೆಂಡತಿ ಮತ್ತು ಮಕ್ಕಳು ಬಟ್ಟೆ ಮೇಲೆ ಕೈ ಹಾಕಿ ಎಳೆಯುತ್ತಿದ್ದರು. ಆಗ ನಾನು ಮತ್ತು ಚಾಸಾ.6 ರವರು ಹೋಗಿ ಬಿಡಿಸಿಕೊಂಡೆವು. ಆಗ ಆರೋಪಿತರು ನಿಮ್ಮನ್ನು ಊರಲ್ಲಿ ಇರಲು ಬಿಡುವುದಿಲ್ಲ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಹೇಳಿ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು. ಆಗ ಚಾಸಾ.1 ರವರನ್ನು ಬಿಡಿಸಿ ಮನೆ ಒಳಗೆ ಕಳುಹಿಸಿದೆವು. ನಂತರ ಚಾಸಾ.1 ಹಾಗೂ 4 ರವರನ್ನು ಯಾರದೋ ಒಬ್ಬರ ಬೈಕನಲ್ಲಿ ಮಲೆಬೆನ್ನೂರು ಆಸ್ಪತ್ರೆಗೆ ಕಳುಹಿಸಿಕೊಟ್ಟೆವು. ಮಾರನೇ ದಿನ ಚಾಸಾ.1 ರವರು ಆರೋಪಿತರ ವಿರುದ್ಧ ದೂರು ನೀಡಿರುತ್ತಾರೆ ಎಂದು ನನಗೆ ತಿಳಿಯಿತು. ಮು.ಮಾ 1 ಚಾಸಾ.1 ರವರು ಗಲಾಟೆ ದಿನ ಧರಿಸಿದ್ದ ಬಟ್ಟೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಸಿ ವಕೀಲರಿಂದಃ**

ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ . ಚಾಸಾ.1 ರವರ ಮನೆ

ಹತ್ತಿರ ನನ್ನ ಕಣ ಇತ್ತು ಎಂಬ ಬಗ್ಗೆ ಪೊಲೀಸರಿಗೆ ನಾನು ಯಾವುದೇ ದಾಖಲೆ ನೀಡಿಲ್ಲ. ನಾನು ಗಲಾಟೆಯನ್ನು ನೋಡೇ ಇಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು 4 ರವರಿಗೆ ಯಾವುದೇ ರೀತಿಯ ಗಾಯ ಆಗಿಲ್ಲ ಹಾಗೂ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ ಹಾಗೂ ಅವರಿಗೆ ಯಾವುದೇ ರೀತಿಯ ಗಾಯ ಆಗಿಲ್ಲ ಎಂದು ಪೊಲೀಸರು ಪ್ರಕರಣದಲ್ಲಿ ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನಾ ದಿನ ಚಾಸಾ.1 ರವರ ಮನೆ ಹತ್ತಿರದ ನಮ್ಮ ಕಣಕ್ಕೆ ಹುಲ್ಲು ತರಲು ಹೋಗಿದ್ದೇನೆ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ.1 ಮತ್ತು 4 ರವರಿಗೆ ಆರೋಪಿತರು ಯಾವುದೇ ರೀತಿ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ಆರೋಪಿತರ ನಡುವೆ ಜಾಗದ ವಿಚಾರವಾಗಿ ಗಲಾಟೆಗಳು ಆಗುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರರೇ ಆರೋಪಿತರೊಂದಿಗೆ ಗಲಾಟೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರರು ಘಟನೆಯಾದ 4-5 ದಿನಗಳ ನಂತರ ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ.1 ರವರ ಬಟ್ಟೆ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಗಂಡನ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ